ST CARD



ಪತ್ರಗಳಲ್ಲಿ ಶ್ರೀಮಾತೆ ಹೀಗೆ ಬರೆದಿದ್ದಾರೆ : "ಶ್ರೀರಾಮಕೃಷ್ಣರು ಸಾಕ್ಷಾತ್ ಭಗವಂತನ ಅವತಾರವೇ. ಅವರನ್ನೇ ಸ್ಮರಿಸುತ್ತಿರು. ಯಾವ ಜವಾಬ್ದಾರಿ ನಿನ್ನ ಮೇಲೆ ಬಿದ್ದಿದೆಯೋ ಅವರನ್ನು ಸ್ಮರಿಸುತ್ತಲೇ ಅದನ್ನು ಮಾಡುತ್ತಿರು. ಅವರು ನಿನಗೆ ಸಹಾಯ ಮಾಡುವರು" ಎಂದು. ಕೆಲವು ಪತ್ರಗಳಲ್ಲಿ ತಮ್ಮ ನಿಜಸ್ವರೂಪದ ಪರಿಚಯವನ್ನು ಮಾಡಿಕೊಟ್ಟಿರುವರು. ಭಕ್ತನೊಬ್ಬನ ಪತ್ರದಲ್ಲಿ ಹೀಗೆ ಬರೆದಿದ್ದಾರೆ: "ನಿನಗೆ ನನ್ನ ರೂಪದ ಧ್ಯಾನವನ್ನು ಮಾಡಲು ಇಚ್ಛೆಯಾದರೆ ಹಾಗೆಯೇ ಮಾಡು. ಗುರು ಮಹಾ ರಾಜರಿಗೂ ನನಗೂ ಯಾವ ಭೇದವೂ ಇಲ್ಲ. ಅವರೇ ಈ ನನ್ನ ಶರೀರದಲ್ಲಿದ್ದಾರೆ."

ಶ್ರೀರಾಮಕೃಷ್ಣ ವಚನವೇದವನ್ನು ರಚಿಸಿ ಪ್ರಕಟಿಸಿದಾಗ, ಮಹೇಂದ್ರನಾಥ ಗುಪ್ತರಿಗೆ ಪತ್ರ ಬರೆದು ಶ್ರೀಮಾತೆಯವರು ಹೀಗೆ ತಮ್ಮ ಆನಂದವನ್ನು ವ್ಯಕ್ತಪಡಿಸಿದ್ದಾರೆ:

"ಅವರಿಂದ ಏನೇನು ಕೇಳಿದ್ದೆಯೋ ಅವೆಲ್ಲವೂ ಸತ್ಯ. ಇದರ ಬಗ್ಗೆ ನೀನೇನೂ ಭಯಪಡಬೇಕಾಗಿಲ್ಲ. ಒಂದು ಕಾಲದಲ್ಲಿ ತಮ್ಮ ವಚನಾಮೃತವನ್ನು ಅವರು ನಿನ್ನ ಬಳಿ ಇರಿಸಿದ್ದರು. ಈಗ ಆವಶ್ಯಕತೆ ಒದಗಿಬಂದು ಅವರೇ ಅವುಗಳನ್ನು ಪ್ರಚಾರ ಮಾಡುತ್ತಿದ್ದಾರೆ. ಅವರ ಈ ಉಪದೇಶಗಳು ಜಗತ್ತಿನ ಮುಂದೆ ಬರದಿದ್ದರೆ ಜನರು ಎಚ್ಚರಗೊಳ್ಳುವುದಿಲ್ಲ. ನಿನ್ನ ಬಳಿ ಇರುವ ವಚನಗಳು ಸತ್ಯ. ನಿನ್ನ ಬಾಯಿಂದ ಒಂದು ದಿನ ನಾನು ಅವುಗಳನ್ನು ಕೇಳುತ್ತಿದ್ದಾಗ, ಅವರೇ ಹೇಳುತ್ತಿದ್ದಾರೆ ಎಂದು ನನಗೆ ಅನ್ನಿಸಿತು."

ಇನ್ನೊಂದು ಪತ್ರದಲ್ಲಿ ಶ್ರೀಮಾತೆ ಹೀಗೆ ಬರೆಯುತ್ತಾರೆ: "ವಚನವೇದವು ಶ್ರೀರಾಮಕೃಷ್ಣರ ಮುಖದಿಂದಲೇ ಬಂದಿರು ವುದು. ಅವುಗಳನ್ನು ನೀನು ಪ್ರಚಾರಮಾಡಿ ಜನರಿಗೆ ಉಪಕಾರ ಮಾಡಿರುವೆ. ಅವುಗಳನ್ನು ಪುಸ್ತಕರೂಪದಲ್ಲಿ ತಂದು ನಿಜ ವಾಗಿಯೂ ಒಳ್ಳೆಯದು ಮಾಡಿದೆ. ಶ್ರೀರಾಮಕೃಷ್ಣರು ನಿನ್ನ ಇಷ್ಟಾರ್ಥವನ್ನು ಪೂರೈಸಲಿ..." – ಇಂತಿ ನಿನ್ನ ತಾಯಿ.

ಸಹೋದರಿ ನಿವೇದಿತಾ ಭಾರತದಿಂದ ಕೆಲವು ದಿನಗಳಿಗಾಗಿ ತನ್ನ ದೇಶಕ್ಕೆ ಹೋಗಿದ್ದಾಗ, ಶ್ರೀಮಾತೆಗೆ ಪತ್ರ ಬರೆದಿದ್ದಳು. ಅದಕ್ಕೆ ಉತ್ತರವಾಗಿ ಶ್ರೀಮಾತೆ ಬರೆದ ಕಾಗದದ ಒಕ್ಕಣೆ ಇದು:

**ನನ್ನ ಪ್ರೀತಿಯ ಚಿಕ್ಕ ಮಗಳೇ,**

ನನ್ನ ಸ್ನೇಹ ಮತ್ತು ಆಶೀರ್ವಾದಗಳನ್ನು ಸ್ವೀಕರಿಸು. ನೀನು ನನ್ನ ಶಾಂತಿಗಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತಿರುವೆ ಎಂದು ತಿಳಿದು ಆನಂದವಾಯಿತು. ನೀನು ಆ ದಿವ್ಯ ಆನಂದಮಯಿ ಜಗನ್ಮಾತೆಯ ಪ್ರತಿಮೂರ್ತಿಯೇ ಆಗಿದ್ದೀಯೆ. ನನ್ನ ಬಳಿ ಇರುವ ನಿನ್ನ ಫೋಟೋವನ್ನು ನಾನು ಆಗಾಗ ನೋಡುತ್ತಿರು ತ್ತೇನೆ. ಆಗ, 'ನೀನು ನನ್ನ ಬಳಿಯೇ ಇರುವೆ' ಎಂದು ನನಗೆ ಅನ್ನಿಸುವುದು. ನೀನು ಯಾವಾಗ ಮರಳಿ ಬರುವೆ ಎಂದು ಕಾಯುತ್ತಿರುವೆನು. ಬ್ರಹ್ಮಚಾರಿಣಿಯಾದ ನಿನ್ನ ಶುದ್ಧ ಹೃದಯದಲ್ಲಿ ನೀನು ನನಗಾಗಿ ಸಲ್ಲಿಸುತ್ತಿರುವ ಪ್ರಾರ್ಥನೆ ಸಫಲವಾಗಲಿ ಎಂದು ಆಶಿಸುತ್ತೇನೆ. ನಾನು ಚೆನ್ನಾಗಿಯೂ ಮತ್ತು ಸಂತೋಷವಾಗಿಯೂ ಇದ್ದೇನೆ. ನಿನ್ನ ಕಾರ್ಯಗಳಿಗೆ ಭಗವಂತನು ಸಹಾಯಮಾಡಲಿ ಹಾಗೂ ನಿನಗೆ ಶಕ್ತಿಯನ್ನು, ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಆದಷ್ಟು ಬೇಗ ನೀನು ಮರಳಿ ಬರಲು ಅವಕಾಶವಾಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಭಾರತದಲ್ಲಿ 'ನಾರಿಯರ ಆಶ್ರಮ' ವನ್ನು ಸ್ಥಾಪಿಸುವ ನಿನ್ನ ಇಚ್ಛೆ ಪೂರ್ಣವಾಗಲಿ. ಆ ಆಶ್ರಮವು ಭವಿಷ್ಯದಲ್ಲಿ ಎಲ್ಲರಿಗೂ ಸರಿಯಾದ ಧರ್ಮವನ್ನು ಕಲಿಸಿ, ಆಶ್ರಮದ ಉದ್ದೇಶ ಸಫಲವಾಗಲಿ.

ಪ್ರಾಣಪುರುಷನಾದ ಭಗವಂತನು ತನ್ನ ಗುಣಗಾನವನ್ನು ತಾನೇ ಹಾಡುತ್ತಿದ್ದಾನೆ. ಈ ನಶ್ವರ ಜಗತ್ತಿನ ಮೂಲಕವೇ ನೀನು ಅವನ ಆ ನಿತ್ಯಸಂಗೀತವನ್ನು ಕೇಳುತ್ತಿರುವೆ. ಮರಗಳು, ಪರ್ವತಗಳು, ಪಕ್ಷಿಗಳು ಎಲ್ಲರೂ ಭಗವಂತನ ಲೀಲೆಯನ್ನು ಹಾಡುತ್ತಿದ್ದಾರೆ. ದಕ್ಷಿಣೇಶ್ವರದಲ್ಲಿ ವಟವೃಕ್ಷಗಳು ಕಾಳೀ ಮಾತೆಯ ಸ್ತೋತ್ರವನ್ನು ಹಾಡುತ್ತಿವೆ. ಯಾರಿಗೆ ಕೇಳುವ ಶಕ್ತಿಯಿದೆಯೋ ಅವರು ಅದನ್ನು ಕೇಳುವರು.

ಮಿಸೆಸ್. ವಾಟರ್ ಮ್ಯಾನ್ ಎಂಬಾಕೆಯ ದೃಢವಿಶ್ವಾಸದ

ಬಗ್ಗೆ ಕೇಳಿ ತಿಳಿದು ಬಹಳ ಸಂತೋಷವಾಯಿತು. ತನ್ನ ಪತಿಯು ಮರಣ ಹೊಂದಿದರೂ ತನ್ನನ್ನು ಅಗಲಿಲ್ಲವೆಂಬುದನ್ನು ಅರಿತು, ಆಕೆ ನಿಜವಾಗಿಯೂ ಸರಿಯಾದ ಬೆಳಕನ್ನೇ ಪಡೆದು ಕೊಂಡಿದ್ದಾಳೆ. ಏಕೆಂದರೆ, 'ದೇಹ ನಾಶವಾದರೂ ಆತ್ಮ ನಶಿಸುವುದಿಲ್ಲ.' ನನ್ನ ಈ ಮಾತುಗಳು ಅವಳಿಗೆ ಶಕ್ತಿ ನೀಡಿವೆ ಎಂದು ಆಶಿಸುತ್ತೇನೆ. ಅವಳು ನಿನ್ನ ಕೆಲಸಗಳಿಗೆ ಸಹಾಯ ಮಾಡುವಂತಾಗಲಿ.

ಮತ್ತು, ನನ್ನ ಪ್ರೀತಿ ಮತ್ತು ಆಶೀರ್ವಾದ ಹಾಗೂ ನಿನ್ನ ಆಧ್ಯಾತ್ಮಿಕ ಪ್ರಗತಿಗಾಗಿ ನನ್ನ ಪ್ರಾರ್ಥನೆಗಳು ಸದಾ ಇರುತ್ತವೆ. ನೀನು ನಿಜವಾಗಿಯೂ ಒಳ್ಳೆಯ ಕೆಲಸ ಮಾಡುತ್ತಿರುವೆ. ಆದರೆ ಬಂಗಾಳಿ ಭಾಷೆಯನ್ನು ಮರೆಯಬೇಡ! ಏಕೆಂದರೆ ನೀನು ಇಲ್ಲಿಗೆ ಬಂದಾಗ ನಿನ್ನ ಮಾತುಗಳನ್ನು ನಾನು ಅರ್ಥಮಾಡಿಕೊಳ್ಳಲಾರೆ. ಧ್ರುವ, ಸಾವಿತ್ರಿ, ಸೀತೆ-ರಾಮ ಮೊದಲಾದವರ ಬಗ್ಗೆ ನೀನು ಅಲ್ಲಿ ಭಾಷಣಗಳನ್ನು ಕೊಡುತ್ತಿರುವೆ ಎಂದು ತಿಳಿದು ಆನಂದವಾಗಿದೆ. ಬರೀ ಪ್ರಾಪಂಚಿಕ ಮಾತುಕತೆಗಳಿಗಿಂತ ಇಂಥವರ ಜೀವನಚರಿತ್ರೆಗಳನ್ನು ಹೇಳುವುದೇ ಒಳ್ಳೆಯದು. ಭಗವಂತನ ನಾಮವೂ, ಲೀಲೆಯೂ ಅದೆಷ್ಟು ಸುಂದರ!

ಆಶೀರ್ವಾದಗಳೊಂದಿಗೆ

**ನಿನ್ನ ತಾಯಿ**

***

ವಿವಾಹ ಮಾಡಿಕೊಂಡು ಪರಿತಪಿಸುತ್ತಿರುವ ಒಬ್ಬ ಭಕ್ತನಿಗೆ ಶ್ರೀಮಾತೆ ಹೀಗೆ ಪತ್ರ ಬರೆಯುತ್ತಾರೆ:

"ವಿವಾಹವಾದರೆ ಏನಂತೆ? ಚೆನ್ನಾಗಿಯೇ ಎಲ್ಲಾ ನಡೆಯುವುದು. ಭಗವಂತನ ನಾಮದಲ್ಲಿ ವಿಶ್ವಾಸವಿಡು, ನಿನ್ನ ಪತ್ನಿಗೂ ಒಳ್ಳೆಯ ಉಪದೇಶಗಳನ್ನು ನೀಡು. ಓದಲು ಒಳ್ಳೆಯ ಪುಸ್ತಕಗಳನ್ನು ಕೊಡುತ್ತಿರು"

ನಿನಗೆ ನನ್ನ ಆಶೀರ್ವಾದಗಳು .......... ಇತ್ಯಾದಿ

***

ಸಂನ್ಯಾಸಿ ಜೀವನ ನಡೆಸಲು ಇಚ್ಛಿಸುತ್ತಿರುವ ಒಬ್ಬ ಭಕ್ತನಿಗೆ ಶ್ರೀಮಾತೆ ಹೀಗೆ ಬರೆಯುತ್ತಾರೆ:

"ತ್ಯಾಗ ಮಾಡಬೇಕಾದರೆ ಮೊದಲು ಭಗವಂತನ ಮೇಲೆ ಎಷ್ಟು ವ್ಯಾಕುಲತೆ ಇದೆ ಎಂದು ಪರೀಕ್ಷೆ ಮಾಡಿ ನೋಡಬೇಕು. ಭಗವಂತನಿಲ್ಲದೆ ಇನ್ನು ಯಾರೂ ತನಗಿಲ್ಲ ಎಂಬುದು ಮನಸ್ಸಿನಲ್ಲಿ ದೃಢವಾದರೆ ಮಾತ್ರ ತ್ಯಾಗ ಮಾಡಬೇಕು. ಅದಿಲ್ಲದಿದ್ದರೆ ಈ ವೈರಾಗ್ಯ ಕ್ರಮೇಣ ಕಡಮೆಯಾಗುವುದು."

ನಿನಗೆ ನನ್ನ ಆಶೀರ್ವಾದಗಳು...

***

ಒಬ್ಬ ಗೃಹಿಣಿಗೆ ಬರೆದ ಪತ್ರ ಇದು:

**ಸ್ನೇಹದ ಕಮಲಾ,**

ನಾನು ದೇವಘರದಲ್ಲಿರುವಾಗಲೇ ನಿನ್ನ ಪತ್ರ ಸಿಕ್ಕಿತು. ಹಲವಾರು ಸಮಸ್ಯೆಗಳ ಕಾರಣ ಅಲ್ಲಿಂದ ನಾನು ಪತ್ರ ಬರೆಯಲಾಗಲಿಲ್ಲ. ಆದುದರಿಂದ ಪತ್ರ ಬರೆಯುವುದು ವಿಳಂಬವಾಯಿತು. ಕಳೆದ ಶನಿವಾರ ಇಲ್ಲಿಗೆ ತಲುಪಿದೆ. ಈಗ ಮೊದಲಿಗಿಂತ ಆರೋಗ್ಯವಾಗಿದ್ದೇನೆ.

ಪುಸ್ತಕವನ್ನು ಅನೇಕ ಬಾರಿ ಓದಿ ನೋಡು, ಒಂದೆರಡು ಸಲ ಓದಿದರೆ ಏನೂ ಅರ್ಥವಾಗುವುದಿಲ್ಲ. ಮನಸ್ಸು ಚೆನ್ನಾಗಿರುವಾಗ ಓದಿದರೆ ಒಳ್ಳೆಯದು. ಮನಸ್ಸು ಕೆಟ್ಟಿರುವಾಗ ಓದಿದರೆ ಏನೂ ಅರ್ಥವಾಗುವುದಿಲ್ಲ. ಒಳ್ಳೆಯ ಗ್ರಂಥಗಳನ್ನು ಜೊತೆಯಲ್ಲಿಟ್ಟುಕೋ. ಸಮಯ ಬಂದಾಗ ಓದುವೆಯಂತೆ. ಸದಾ ಭಗವಂತನ ಮೂರ್ತಿಯ ಧ್ಯಾನ ಮತ್ತು ನಾಮದ ಜಪವನ್ನು ಮಾಡುತ್ತಿರು. ಯಾವ ಮೂರ್ತಿ ನಿನಗೆ ಇಷ್ಟವೋ ಅದನ್ನೇ ಧ್ಯಾನಿಸು. ಸಾಧುಸಂತರ ಸಂಗ ಯಾವಾಗಲೂ ಸಿಗುವುದಿಲ್ಲ. ಆದುದರಿಂದ ಅಂಥವರ ಜೀವನಚರಿತ್ರೆಗಳನ್ನು ಓದು. ಇದರಿಂದ ನಿನ್ನ ಮನಸ್ಸು ಪವಿತ್ರ ಮತ್ತು ನಿರ್ಮಲವಾಗುವುದು. ಸೋಮಾರಿಯಾಗಿ ಕಾಲ ಕಳೆಯಬೇಡ. ಇದರಿಂದ ಶರೀರ, ಮನಸ್ಸು – ಎರಡೂ ಕೆಡುವುದು. ಕೈಯಲ್ಲಿ ಕೆಲಸ ಮಾಡುತಮನಸ್ಸಿನಲ್ಲಿ ಭಗವನ್ನಾಮವನ್ನು ಹೇಳಿಕೊಳ್ಳುತ್ತಿರು. ಇಷ್ಟು ಮಾಡಿದರೆ, ಮನಸ್ಸು ಪವಿತ್ರವಾಗುವುದು; ಖಂಡಿತ ಆಗುವುದು, ಚಿಂತಿಸಬೇಡ. ಭಗವಂತನನ್ನೇ ಕರೆ. ಅವನು ದಯಾಮಯನೂ, ಪ್ರೇಮಮಯನೂ ಆಗಿದ್ದಾನೆ. ಮನಸ್ಸು ಪ್ರಾಣಗಳೊಂದಿಗೆ ಅವನನ್ನು ಕರೆದರೆ, ಖಂಡಿತ ಅವನು ಕರುಣೆ ತೋರುವನು. ಕೇವಲ ಅವನನ್ನೇ ಕರೆ. ಇದರಿಂದ ಮನಸ್ಸು ಪವಿತ್ರ ಮತ್ತು ನಿರ್ಮಲವಾಗುವುದು ಮಾತ್ರವಲ್ಲ, ಅವನು ಎಂಥ ಕರುಣಾಶಾಲಿಯೆಂಬುದನ್ನು ಕಂಡುಕೊಳ್ಳುವೆ. ನೀನು ಹೇಗಿದ್ದೀಯೆ ಎಂಬುದನ್ನು ತಿಳಿಸು. ನನ್ನ ಸ್ನೇಹಾಶೀರ್ವಾದಗಳನ್ನು ಸ್ವೀಕರಿಸು. ಆಗಾಗ ಪತ್ರ ಬರೆಯಲು ಮಾತ್ರ ಮರೆಯಬೇಡ.

ನಿನಗೆ ಮಂಗಳವನ್ನು ಬಯಸುತ್ತಾ,

**ನಿನ್ನ ತಾಯಿ.**

***

ಸ್ವಂತ ತಾಯಿಗಿಂತಲೂ ಹೆಚ್ಚಿನ ಸ್ನೇಹ, ಪ್ರೀತಿಯಿಂದ ಕೂಡಿದ ಶ್ರೀಮಾತೆಯವರ ಪತ್ರಗಳನ್ನು ಪಡೆದವರು ನಿಜವಾಗಿಯೂ ಧನ್ಯರು. ಬಂಗಾಳಿ ಭಾಷೆಯಲ್ಲಿ ಅವರು ಬರೆಸಿದ್ದರೂ, ಇಂಗ್ಲಿಷ್‌ಗೆ ಅನುವಾದ ಮಾಡಿಸಿ ದೂರದೂರದ ಆಧ್ಯಾತ್ಮಿಕ ಪಿಪಾಸುಗಳೂ, ಭಕ್ತರೂ ಈ ಪತ್ರಗಳನ್ನು ಪಡೆದಿದ್ದಾರೆ. ಈ ಪತ್ರಗಳನ್ನು ಈಗಲೂ ಯಾರು ಬೇಕಾದರೂ ಓದಿ, ಶ್ರೀಮಾತೆಯವರ ಮಾರ್ಗದರ್ಶನವನ್ನೂ, ಆಶೀರ್ವಾದವನ್ನೂ ಪಡೆದು ಧನ್ಯರಾಗಿ ಶಾಂತಿಯನ್ನು ಪಡೆಯಬಹುದು.

# ಶ್ರೀಮಾತೆಯ ಸನ್ನಿಧಿಯಲ್ಲಿ

ಸ್ವಾಮಿ ಸ್ವಸ್ವರೂಪಾನಂದ



**ಸ್ವಾಮಿ ಸ್ವಸ್ವರೂಪಾನಂದರ (ಆಶೂ ಮಹಾರಾಜ್) ಪೂರ್ವಾಶ್ರಮದ ಹೆಸರು ಆಶುತೋಷ್ ಅಧ್ವರ್ಯ ಎಂದು. ಅವರು ಶ್ರೀಮಾತೆಯವರಿಂದ ೧೯೧೪ ರಲ್ಲಿ ದೀಕ್ಷೆ ತೆಗೆದುಕೊಂಡರು. ೧೯೧೭ರಲ್ಲಿ ಬಾಂಕುರಾ ಆಶ್ರಮ ಸೇರಿದರು. ಆಗ ಬಾಂಕುರಾ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದವರು, ಅದರ ಸ್ಥಾಪಕರಾಗಿದ್ದ ಸ್ವಾಮಿ ಮಹೇಶ್ವರಾನಂದಜಿ ಅವರು. ಅವರನ್ನು ಡಾಕ್ಟರ್ ಮಹಾರಾಜ್ ಎಂದೂ ಕರೆಯುತ್ತಿದ್ದರು. ಆಶೂ ಮಹಾರಾಜರು ಅವರ ಕೆಳಗಡೆ ಕಾರ್ಯಕರ್ತರಾಗಿದ್ದರು. ೧೯೩೦ ರಲ್ಲಿ ಗಂಧೇಶ್ವರೀ ನದಿಯ ಪ್ರವಾಹದಲ್ಲಿ ಬಾಂಕುರಾ ಮಠ ಸಂಪೂರ್ಣವಾಗಿ ಮುಳುಗಿಹೋದಾಗ, ಡಾಕ್ಟರ್ ಮಹಾರಾಜ್ ಮತ್ತು ಆಶೂ ಮಹಾರಾಜ್ ಗರ್ಭಮಂದಿರದಲ್ಲಿದ್ದ ಶ್ರೀರಾಮಕೃಷ್ಣ, ಶ್ರೀಮಾತೆ ಮತ್ತು ಸ್ವಾಮೀಜಿಯ ಫೋಟೊಗಳನ್ನು ತೆಗೆದುಕೊಂಡು ಹೋಗಿ ಭಕ್ತರೊಬ್ಬರ ಮನೆಯಲ್ಲಿಟ್ಟು ಸಂರಕ್ಷಿಸುತ್ತಾರೆ. ಆಶೂ ಮಹರಾಜರು ಬೆಳಗಿನ ಜಾವ ಎದ್ದು ೩–೪ ಗಂಟೆ ಕಾಲ ಜಪ ಧ್ಯಾನ ಮಾಡುವರು. ನಂತರ ಗೋಶಾಲೆ ಮತ್ತು ಮಠದ ಕೆಲಸಗಳಲ್ಲಿ ನಿರತರಾಗುತ್ತಿದ್ದರು. ಸಾಯಂಕಾಲ ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಸಂದೇಶಗಳನ್ನು ಕುರಿತು ಜನರಿಗೆ ಪ್ರವಚನ ಮಾಡುತ್ತಿದ್ದರು. ವಯಸ್ಸಾದಾಗ ಕ್ಯಾನ್ಸರ್ ರೋಗಕ್ಕೆ ತುತ್ತಾದರೂ ಕೂಡ, ಬೇರೆಯವರ ಸೇವೆ ತೆಗೆದುಕೊಳ್ಳುತ್ತಿರಲಿಲ್ಲ. ಬಾಂಕುರಾದ ಡಾ. ಮಂಡಲ್ ಮುಂತಾದವರು ಅವರನ್ನು ಕೊಲ್ಕತಾ ಮೆಡಿಕಲ್ ಕಾಲೇಜಿಗೆ ಸೇರಿಸಲು ಕರೆದುಕೊಂಡು ಹೋದರು. ರೈಲ್ವೆ ಸ್ಟೇಷನ್ನಿಲ್ಲೇ ಆಶು ಮಹಾರಾಜರು ವಿಚಾರಿಸಿದರು: "ಇಲ್ಲಿಂದ ಗಂಗೆ ಎಷ್ಟು ದೂರ? ಬೇಲೂರು ಮಠ ಎಷ್ಟು ದೂರ?" ಎಂದು. ಇಷ್ಟು ಕೇಳಿ ಶ್ರೀಮಾತೆಯವರನ್ನೇ ಸ್ಮರಿಸುತ್ತ, ಆಶೂ ಮಹಾರಾಜರು 'ಜೈ ಮಾ' ಎನ್ನುತ್ತ, ರೈಲ್ವೆ ನಿಲ್ದಾಣದಲ್ಲೇ ತಮ್ಮ ಕೊನೆಯುಸಿರನ್ನು ಬಿಟ್ಟರು.**

**ಆಶೂ ಮಹಾರಾಜರ ದೇಹದ ಬಣ್ಣ ಶ್ಯಾಮಲವರ್ಣ, ಅವರದು ದೀರ್ಘಕಾಯ. ಅವರು ಶ್ರೀಮಾತೆಯವರ ಬಗ್ಗೆ ಬರೆದ ನೆನಪುಗಳು ಇವು. ಈ ಅಪೂರ್ವ ನೆನಪುಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟವರು ಸ್ವಾಮಿ ಶಾಂತಿನಾಥಾನಂದಜಿ ಅವರು. ಇವರು ವಾರಾಣಸಿಯ ರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.**

ಬಹುಶಃ ೧೯೧೩ನೇ ಇಸವಿಯಿದ್ದಿರಬಹುದು. ವಿಭೂತಿ ಘೋಷ್ ಮತ್ತು ವೈಕುಂಠ ಡಾಕ್ಟರ್ (ನಂತರ ಡಾಕ್ಟರ್ ಮಹಾರಾಜ್, ಸ್ವಾಮಿ ಮಹೇಶ್ವರಾನಂದಜಿ) – ಇವರ ಬಳಿ ಶ್ರೀಮಾತೆಯವರ ವಿಷಯ ಕೇಳಿ, ಜಯರಾಂಬಾಟಿಗೆ ಹೋದರೆ ಹೇಗೆ ಎಂದೆನಿಸಿತು. ವಿಭೂತಿ ಬಾಬುವಿನಿಂದ ಜಯರಾಂಬಾಟಿಗೆ ಹೋಗುವ ದಾರಿ ಇತ್ಯಾದಿ ವಿವರ ತಿಳಿದುಕೊಂಡೆ. ಒಂದು ದಿನ ಬೆಳಗಿನ ಜಾವ, ಒಬ್ಬನೇ ಹೊರಟೆ. ಜೊತೆಯಲ್ಲಿ ರಾಜೇನ್ ದತ್ತನೂ ಬರುವ ಮಾತಿತ್ತು, ಆದರೆ ಏನೋ ಕಾರಣಗಳಿಂದ ಅವನು ಬರಲಾಗಲಿಲ್ಲ. ಒಬ್ಬನೇ ಏಕೆ ಹೋಗಬಾರದು ಎಂದೆನಿಸಿತು; ವಿಷ್ಣುಪುರದಿಂದ ಸೀದಾ ನಡೆಯಲು ಶುರುಮಾಡಿದೆ. ಆಗ ಮಳೆಗಾಲ. ಮಳೆಗಾಳಿಯಲ್ಲಿ ಜಯರಾಂಬಾಟಿ ತಲುಪಿದಾಗ ಮಧ್ಯಾಹ್ನ ಮುಗಿದು ಸಾಯಂಕಾಲ ಶುರುವಾಗಿತ್ತು. ಜನರನ್ನು ವಿಚಾರಿಸಿ ಶ್ರೀಮಾತೆಯ ಮನೆ ಹತ್ತಿರ ಬಂದಾಗ, ವಯಸ್ಕ ಮಹಿಳೆಯೊಬ್ಬರು ಒಂದು ಕೈಯಲ್ಲಿ ತೊಳೆಯಲು ಕೆಲವು ಪಾತ್ರೆಗಳು, ಮತ್ತೊಂದು ಕೈಲಿ ಒಂದು ಲೋಟದಲ್ಲಿ ಕುಡಿಯುವ ನೀರು ಹಿಡಿದು ನಿಂತಿದ್ದರು. ಆಕೆಯನ್ನು ಶ್ರೀಮಾತೆಯ ಮನೆ ಎಲ್ಲೆಂದು ಕೇಳಬೇಕು ಎಂದುಕೊಳ್ಳುತ್ತಿದ್ದೆ. ನನಗೆ ಕೇಳಲು ಅವಕಾಶ ಕೊಡದೆಯೇ ಅವರು ನನ್ನ ಒಣಗಿದ, ಬಡವಾದ ಶರೀರವನ್ನು ನೋಡಿ ಹೇಳಿದರು, "ಬಾ ಮಗು, ಮಳೆಯಲ್ಲಿ ತುಂಬಾ ಕಷ್ಟಪಟ್ಟಿದ್ದೀಯೆ."

ಅವರ ಸ್ನೇಹಭರಿತ ದನಿಯನ್ನು ಕೇಳಿಯೇ ಬಳಿಕ ನಾನು ಮತ್ತೆ ವಿಚಾರಿಸಬೇಕಾಗಲಿಲ್ಲ. ಈಕೆಯೇ ನಿಶ್ಚಯವಾಗಿ ಶ್ರೀಮಾತೆ ಎಂದು ಮನಸ್ಸಿಗೆ ಅನ್ನಿಸಿತು. ತಕ್ಷಣ ಅವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಸಲ್ಲಿಸಿದೆ. ಶ್ರೀಮಾತೆ ಕುಳಿತುಕೊಳ್ಳುವ ಕೊಠಡಿಯನ್ನು ತೋರಿಸಿ ಹೇಳಿದರು, "ಮಗು, ಸ್ವಲ್ಪ ವಿಶ್ರಮಿಸು, ನಾನು ಈಗಲೇ ಬಂದೆ." ನಾನು ಆ ಕೊಠಡಿಯಲ್ಲಿದ್ದ ತಾಳೆಗರಿಯ ಚಾಪೆಯ ಮೇಲೆ ಕುಳಿತು ವಿಶ್ರಮಿಸಲಾರಂಭಿಸಿದೆ. ಸ್ವಲ್ಪ ಸಮಯದ ನಂತರ ಶ್ರೀಮಾತೆಯವರೇ ಒಂದು ತಟ್ಟೆಯಲ್ಲಿ ಪುರಿ, ಎರಡು ತೆಂಗಿನಕಾಯಿ ಲಡ್ಡುಗಳು ಮತ್ತು ಒಂದು ಲೋಟದಲ್ಲಿ ಕುಡಿಯುವ ನೀರನ್ನು ನನ್ನ ಮುಂದಿಟ್ಟು ಹೇಳಿದರು, "ಮಗು, ಇದನ್ನು ತಿನ್ನಪ್ಪ."

ಬಹಳ ದೂರ ನಡೆದು ಬಂದ ನನಗೆ ತುಂಬಾ ಬಾಯಾರಿಕೆಯಾಗಿತ್ತು. ಶ್ರೀಮಾತೆಯವರ ಕೈಲಿದ್ದ ಲೋಟವನ್ನು ನೋಡಿಯೇ, ನೀರನ್ನು ಕೇಳಿಬಿಡಬೇಕೆನಿಸಿತ್ತು. ಆದರೆ ನಾಚಿಕೆಯಿಂದ ಕೇಳಲಿಲ್ಲ. ನಂತರ ಶ್ರೀಮಾತೆಯವರು ನನಗೋಸ್ಕರ ಆ ಲೋಟದಲ್ಲಿ ನೀರನ್ನು ತಂದಾಗ ನನಗೆ ತುಂಬಾ ಸಂತೋಷವಾಯಿತು.